ದಿನಾಂಕ: 19.09.2022 ಮಂಗಳವಾರ ಬೆಳಗ್ಗೆ 11.00 ಗಂಟೆಗೆ ರಾಜಾಜಿನಗರ ವಾರ್ಡ್ ನಂ. 99 ರಲ್ಲಿ ಶ್ರೀ ಆರ್. ಗಂಗಾಧರ, ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರ:-

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-**

1. ಶ್ರೀ ಆರ್. ಗಂಗಾಧರ, ನೋಡಲ್ ಅಧಿಕಾರಿಗಳು
2. ಶ್ರೀ ಸುಭಾಸ್ ಪಾಟೀಲ್, ಸಹಾಯಕ ಅಭಿಯಂತರರು, ವಾರ್ಡ್ ನಂ. 99
3. ಶ್ರೀಮತಿ ದಿವ್ಯಾ, ಹಿರಿಯ ಆರೋಗ್ಯ ಪರಿವೀಕ್ಷಕರು
4. ಶ್ರೀ ರಘು, ಕಿ.ಆ.ಪ
5. ಡಾ: ವಾಸಂತಿ, ವೈದ್ಯಾಧಿಕಾರಿಗಳು , ಬಿ.ಬಿ.ಎಂ.ಪಿ.
6. ಶ್ರೀ ರಮೇಶ್.ಎಸ್.ಟಿ. ಪಶು ಇಲಾಖೆ
7. ಶ್ರೀ ಜಿ.ಸಿ. ಲೋಕೇಶ್, ಅಸ್ಸಸರ್
8. ಶ್ರೀ ಶ್ರೀನಾಥ್, ಅರಣ್ಯ ಇಲಾಖೆ
9. ಶ್ರೀ ನಾಗರಾಜ್.ಎಸ್. ಸದಸ್ಯರು
10. ಶ್ರೀ ಆನಂದ್ ಮೂರ್ತಿ, ಎ.ಇ. ಬೆಸ್ಕಾಂ
11. ಶ್ರೀ ಶ್ರೀನಿವಾಸ್, ವಾರ್ಡ್ ಸದಸ್ಯರು
12. ಶ್ರೀ ಉಮೇಶ್ ವಾರ್ಡ್ ಸದಸ್ಯರು
13. ಶ್ರೀ ಬಸವರಾಜು, ಗುತ್ತಿಗೆದಾರರು, ಬೀದಿ ದೀಪ ನಿರ್ವಹಣೆ
14. ಶ್ರೀ ಎಸ್. ರಾಜಣ್ಣ, ಸದಸ್ಯರು
15. ಶ್ರೀ ಡಿ. ಆನಂದ್, ಸದಸ್ಯರು
16. ಶ್ರೀ ಸುರೇಶ್ ಗಡಗೋಳಿ

ದಿನಾಂಕ: 19.09.2022 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ. 99 ರಾಜಾಜಿನಗರದ ಡಾ: ಅಬ್ದುಲ್ ಕಲಾಂ, ಸಭಾಂಗಣದಲ್ಲಿ ಪಾಲಿಕೆ ಅಧಿಕಾರಿಗಳೊಂದಿಗೆ ಸಭೆಯನ್ನು ಕೈಗೊಂಡು ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಯಿತು.

1. ವಾರ್ಡ್ ಸದಸ್ಯರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಬರುವ ಕಸವನ್ನು ದಿನಾಲು ತೆಗೆಯದೆ ಇರುವ ಬಗ್ಗೆ ಚರ್ಚಿಸಿದರು. ಇದಕ್ಕೆ ಉತ್ತರವಾಗಿ ಶ್ರೀ ರಘು, ಕಿ.ಆ.ಪ. ರವರು ಕಸವನ್ನು ತೆರವುಗೊಳಿಸಲಾಗುತ್ತಿದೆ ಎಂದು ತಿಳಿಸಿದರು.
2. ವಾರ್ಡ್ ಸದಸ್ಯರು ಹಾಗೂ ನೋಡಲ್ ಅಧಿಕಾರಿಗಳು ರಾಜಾಜಿನಗರ 2ನೇ ಬ್ಲಾಕ್‌ನ 21 ರಿಂದ 32ನೇ ಅಡ್ಡ ರಸ್ತೆಗಳಲ್ಲಿರುವ ಬೆಸ್ಕಾಂ ಹಾಗೂ ಬಿ.ಡ್ಬ್ಲ್ಯೂ.ಎಸ್.ಎಸ್.ಬಿ. ರವರು ದುರಸ್ಥಿ ಕಾಮಗಿಳು ಇದ್ದಲ್ಲಿ ಅದನ್ನು ಬೇಗನೆ ಮುಗಿಸಿಕೊಳ್ಳುವಂತೆ ಸೂಚಿಸಿದರು.
3. ನೋಡಲ್ ಅಧಿಕಾರಿಗಳು ವಾರ್ಡ್ ಸದಸ್ಯರಿಗೆ ಹಾಗೂ ಸಾರ್ವಜನಿಕರಿಗೆ ಯಾವುದಾದರು ಗುಂಡಿಗಳು ಕಂಡು ಬಂದರೆ ವಾರ್ಡ್ ಅಭಿಯಂತರರಿಗೆ ತಿಳಿಸುವಂತೆ ಸೂಚನೆ ನೀಡಿದರು.
4. ವಾರ್ಡ್ ಸದಸ್ಯರು ಸರ್ವಿಸ್ ರಸ್ತೆಯ 32ನೇ ಅಡ್ಡ ರಸ್ತೆಯ ಹತ್ತಿರುವಿರುವ ಟ್ರಾನ್ಸ್ ಫಾರ್ಮರನ್ನು ತೆರವುಗೊಳಿಸಿ ಬೇರೆ ಸ್ಥಳಕ್ಕೆ ಸ್ಥಳಾಂತರಿಸಿದ ಶ್ರೀ ಆನಂದ್ ಮೂರ್ತಿ , ಬೆಸ್ಕಾಂ ಅಭಿಯಂತರರರ್ ಕಾರ್ಯದ ಬಗ್ಗೆ ಸ್ಲಾಘನೆ ವ್ಯಕ್ತ ಪಡಿಸಿದರು.
5. ವಾರ್ಡ್ ಸದಸ್ಯರು ತಿಮ್ಮಯ್ಯ ರಸ್ತೆಯ ಪಾದಚಾರಿ ಮಾರ್ಗದಲ್ಲಿರುವ Tails Reset ಮಾಡಿಸಲು ನೋಡಲ್ ಅಧಿಕಾರಿಗಳಿಗೆ ಕೋರಿದರು. ಇದಕ್ಕೆ ಉತ್ತರವಾಗಿ ವಾರ್ಡ್ ಅಭಿಯಂತರರಿಗೆ ಗುತ್ತಿಗೆದಾರರನ್ನು ಕರೆಸಿ, ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿದರು.
6. ಶ್ರೀ ಸುರೇಶ್ ಗಡುಗೋಳಿ ರವರು ಶ್ರೀ ರಘು, ಕಿ.ಆ.ಪ . ರವರ ಕಸ ವಿಲೇವಾರಿ ಕಾರ್ಯದ ಬಗ್ಗೆ ಶ್ಲಾಘನೆ ವ್ಯಕ್ತ ಪಡಿಸಿದರು.

ಪು.ತಿ.ನೋ.

7. ವಾರ್ಡ್ ಸದಸ್ಯರು ಆರ್.ಟಿ.ಓ. ಕಾಂಪ್ಲೆಕ್ಸ್ ನಲ್ಲಿ ರಾತ್ರಿ ವೇಳೆ ದೀಪ ಉರಿಯದೆ ಇರುಅ ಬಗ್ಗೆ ಚರ್ಚಿಸಿದರು. ಇದಕ್ಕೆ ಉತ್ತರವಾಗಿ ನೋಡಲ್ ಅಧಿಕಾರಿಗಳು ಕ್ರಮ ಕೈಗೊಳುವುದಾಗಿ ತಿಳಿಸಿದರು.
8. ವಾರ್ಡ್ ಸದಸ್ಯರು ಬಾಕಿ ಇರುವ ರಸ್ತೆಗಳ ಡಾಂಬರೀಕರಣ ಕಾಮಗಾರಿಗಳನ್ನು ಬೇಗನೆ ಮುಗಿಸಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಕೋರಿದರು.
9. ವಾರ್ಡ್ ಸದಸ್ಯರು ವಾರ್ಡ್ ರಸ್ತೆಗಳಲ್ಲಿ ಕಸವನ್ನು ಅಲ್ಲಲ್ಲಿ ಬಿಸಾಡುವುದನ್ನು ತಪ್ಪಿಸಲು ಕ್ರಮ ಕೈಗೊಳ್ಳಲು ಕೋರಿದರು. ಇದಕ್ಕೆ ಉತ್ತರವಾಗಿ ನೋಡಲ್ ಅಧಿಕಾರಿಗಳು ಮಾರ್ಷಲ್‌ಗಳಿಗೆ ದಂಡ ಹಾಕಲು ಸೂಚಿಸಿದರು.
10. ನೋಡಲ್ ಅಧಿಕಾರಿಗಳು ಕಂದಾಯ ಇಲಾಖೆಯ ಕಾರ್ಯದ ಬಗ್ಗೆ ಚರ್ಚಿಸಿದರು. ಇದಕ್ಕೆ ಉತ್ತರವಾಗಿ ಶ್ರೀ ಲೋಕೇಶ್ ರವರು ಚುನಾವಣೆ ಗುರುತಿನ ಪತ್ರ, ಹಾಗೂ ಇತರೆ ಕಾರ್ಯದಲ್ಲಿ ತೊಡಗಿಸಿಕೊಂಡಿರುವುದಾಗಿ ತಿಳಿಸಿದರು.

ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರಿಗೆ ವಾರ್ಡ್ ಸಮಿತಿ ಸದಸ್ಯರುಗಳಿಗೆ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ವಾರ್ಡ್ ಸಮಿತಿ
ವಾರ್ಡ್ ನಂ. 99